Cadabam's DIAGNOSTICS

PATIENT RIGHTS AND RESPONSIBILITIES
ರೋಗಿಯ ಹಕ್ಕುಗಳು ಮತ್ತು ಜವಾಬ್ದಾರಿಗಳು

PATIENT RIGHTS
ರೋಗಿಗಳ ಹಕ್ಕುಗಳು

Every patient has the right to:
ಪ್ರತಿಯೊಬ್ಬ ರೋಗಿಗೂ ಈ ಕೆಳಗಿನ ಹಕ್ಕುಗಳಿವೆ:

1. **Respect and Dignity:** Be treated with courtesy, respect, compassion, and without discrimination.
   ಗೌರವ ಮತ್ತು ಘನತೆ: ಪ್ರತಿಯೊಬ್ಬ ರೋಗಿಯನ್ನು ಯಾವುದೇ ತಾರತಮ್ಯವಿಲ್ಲದೆ ಸೌಜನ್ಯ, ಗೌರವ ಮತ್ತು ಸಹಾನುಭೂತಿಯಿಂದ ನಡೆಸಿಕೊಳ್ಳುವ ಹಕ್ಕು.
2. **Information and Explanation:** Receive clear information about the prescribed examination, its purpose, procedure, preparation and relevant risks.
   ಮಾಹಿತಿ ಮತ್ತು ವಿವರಣೆ: ಸೂಚಿಸಲಾದ ಪರೀಕ್ಷೆ, ಅದರ ಉದ್ದೇಶ, ವಿಧಾನ, ಪೂರ್ವಸಿದ್ಧತೆ ಮತ್ತು ಸಂಬಂಧಿತ ಅಪಾಯಗಳ ಕುರಿತು ಸ್ಪಷ್ಟ ಮಾಹಿತಿಯನ್ನು ಪಡೆಯುವ ಹಕ್ಕು.
3. **Informed Consent:** Receive appropriate information and provide informed consent before examinations or procedures wherever required.
   ಮಾಹಿತಿಯುಕ್ತ ಒಪ್ಪಿಗೆ: ಅಗತ್ಯವಿರುವ ಸಂದರ್ಭಗಳಲ್ಲಿ ಪರೀಕ್ಷೆಗಳು ಅಥವಾ ವೈದ್ಯಕೀಯ ವಿಧಾನಗಳನ್ನು ನಡೆಸುವ ಮೊದಲು ಸೂಕ್ತ ಮಾಹಿತಿಯನ್ನು ಪಡೆದು, ತಿಳುವಳಿಕೆಯ ಆಧಾರದ ಮೇಲೆ ಒಪ್ಪಿಗೆ ನೀಡುವ ಹಕ್ಕು.
4. **Privacy and Confidentiality:** Have personal information, medical records, images, and reports kept confidential, subject to applicable law.
   ಗೌಪ್ಯತೆ ಮತ್ತು ವೈಯಕ್ತಿಕ ಮಾಹಿತಿಯ ರಕ್ಷಣೆ: ಅನ್ವಯವಾಗುವ ಕಾನೂನುಗಳಿಗೆ ಒಳಪಟ್ಟು, ವೈಯಕ್ತಿಕ ಮಾಹಿತಿ, ವೈದ್ಯಕೀಯ ದಾಖಲೆಗಳು, ಚಿತ್ರಗಳು ಮತ್ತು ವರದಿಗಳನ್ನು ಗೌಪ್ಯವಾಗಿಡುವ ಹಕ್ಕು.
5. **Privacy During Examination:** Receive appropriate privacy, draping, and assistance during imaging procedures.
   ಪರೀಕ್ಷೆಯ ಸಮಯದಲ್ಲಿ ಗೌಪ್ಯತೆ: ಇಮೇಜಿಂಗ್ ಪರೀಕ್ಷೆಗಳ ಸಮಯದಲ್ಲಿ ಸೂಕ್ತ ವೈಯಕ್ತಿಕ ಗೌಪ್ಯತೆ, ದೇಹವನ್ನು ಅಗತ್ಯವಿರುವಂತೆ ಮುಚ್ಚುವ ವ್ಯವಸ್ಥೆ ಮತ್ತು ಸಹಾಯವನ್ನು ಪಡೆಯುವ ಹಕ್ಕು.
6. **Radiation Safety:** Receive examinations justified by clinical need, with radiation exposure kept as low as reasonably achievable (ALARA), particularly for children and pregnant or potentially pregnant patients.
   ವಿಕಿರಣ ಸುರಕ್ಷತೆ: ವೈದ್ಯಕೀಯ ಅಗತ್ಯಕ್ಕೆ ಅನುಗುಣವಾಗಿ ಸಮರ್ಥಿಸಲಾದ ಪರೀಕ್ಷೆಗಳನ್ನು ಪಡೆಯುವ ಹಾಗೂ ವಿಕಿರಣದ ಪ್ರಮಾಣವನ್ನು ಸಾಧ್ಯವಾದಷ್ಟು ಸಮಂಜಸವಾಗಿ ಕಡಿಮೆ ಮಟ್ಟದಲ್ಲಿ (ALARA) ಇರಿಸುವ ಹಕ್ಕು. ವಿಶೇಷವಾಗಿ ಮಕ್ಕಳು, ಗರ್ಭಿಣಿಯರು ಮತ್ತು ಗರ್ಭಿಣಿಯಾಗಿರುವ ಸಾಧ್ಯತೆಯಿರುವ ರೋಗಿಗಳಿಗೆ ಹೆಚ್ಚಿನ ಮುನ್ನೆಚ್ಚರಿಕೆ ವಹಿಸಲಾಗುತ್ತದೆ.
7. **Safe and Quality Care:** Receive services from qualified personnel using appropriately maintained equipment and established safety protocols.
   ಸುರಕ್ಷಿತ ಮತ್ತು ಗುಣಮಟ್ಟದ ಆರೈಕೆ: ಸೂಕ್ತವಾಗಿ ನಿರ್ವಹಿಸಲಾದ ಉಪಕರಣಗಳು ಮತ್ತು ನಿಗದಿತ ಸುರಕ್ಷತಾ ನಿಯಮಗಳನ್ನು ಬಳಸುವ ಅರ್ಹ ಸಿಬ್ಬಂದಿಯಿಂದ ಸೇವೆಗಳನ್ನು ಪಡೆಯುವ ಹಕ್ಕು.
8. **Information About Charges:** Be informed of examination charges and any additional costs before the service, wherever practicable.
   ಶುಲ್ಕಗಳ ಕುರಿತು ಮಾಹಿತಿ: ಸಾಧ್ಯವಿರುವ ಸಂದರ್ಭಗಳಲ್ಲಿ ಸೇವೆಯನ್ನು ಪಡೆಯುವ ಮೊದಲು ಪರೀಕ್ಷಾ ಶುಲ್ಕಗಳು ಮತ್ತು ಯಾವುದೇ ಹೆಚ್ಚುವರಿ ವೆಚ್ಚಗಳ ಕುರಿತು ಮಾಹಿತಿ ಪಡೆಯುವ ಹಕ್ಕು.
9. **Feedback and Grievance Redressal:** Raise concerns or complaints without fear of discrimination or retaliation.
   ಪ್ರತಿಕ್ರಿಯೆ ಮತ್ತು ದೂರು ಪರಿಹಾರ: ತಾರತಮ್ಯ ಅಥವಾ ಪ್ರತೀಕಾರದ ಭಯವಿಲ್ಲದೆ ತಮ್ಮ ಕಳವಳಗಳನ್ನು ವ್ಯಕ್ತಪಡಿಸುವ ಅಥವಾ ದೂರುಗಳನ್ನು ಸಲ್ಲಿಸುವ ಹಕ್ಕು.

PATIENT RESPONSIBILITIES
ರೋಗಿಗಳ ಜವಾಬ್ದಾರಿಗಳು

Every patient is requested to:
ಪ್ರತಿಯೊಬ್ಬ ರೋಗಿಯು ಈ ಕೆಳಗಿನ ಜವಾಬ್ದಾರಿಗಳನ್ನು ಪಾಲಿಸಲು ವಿನಂತಿಸಲಾಗಿದೆ:

1. **Provide Accurate Information:** Share correct personal details, medical history, symptoms, allergies, current medications, and previous relevant investigations.
   ನಿಖರವಾದ ಮಾಹಿತಿ ಒದಗಿಸುವುದು: ಸರಿಯಾದ ವೈಯಕ್ತಿಕ ವಿವರಗಳು, ವೈದ್ಯಕೀಯ ಇತಿಹಾಸ, ರೋಗಲಕ್ಷಣಗಳು, ಅಲರ್ಜಿಗಳು, ಪ್ರಸ್ತುತ ಬಳಸುತ್ತಿರುವ ಔಷಧಿಗಳು ಮತ್ತು ಹಿಂದಿನ ಸಂಬಂಧಿತ ಪರೀಕ್ಷೆಗಳ ಮಾಹಿತಿಯನ್ನು ಒದಗಿಸುವುದು.

PATIENT RESPONSIBILITIES (continued)
ರೋಗಿಗಳ ಜವಾಬ್ದಾರಿಗಳು

2. **Inform About Pregnancy:** Inform staff if pregnant, possibly pregnant, or breastfeeding when relevant to the examination.
   ಗರ್ಭಧಾರಣೆಯ ಕುರಿತು ತಿಳಿಸುವುದು: ಪರೀಕ್ಷೆಗೆ ಸಂಬಂಧಿಸಿದಂತೆ ಗರ್ಭಿಣಿಯಾಗಿದ್ದರೆ, ಗರ್ಭಿಣಿಯಾಗಿರುವ ಸಾಧ್ಯತೆಯಿದ್ದರೆ ಅಥವಾ ಸ್ತನ್ಯಪಾನ ಮಾಡಿಸುತ್ತಿದ್ದರೆ ಸಿಬ್ಬಂದಿಗೆ ತಿಳಿಸುವುದು.
3. **Follow Preparation Instructions:** Observe instructions regarding fasting, hydration, medications, contrast agents, and other examination-specific preparations.
   ಪರೀಕ್ಷಾ ಪೂರ್ವಸಿದ್ಧತಾ ಸೂಚನೆಗಳನ್ನು ಪಾಲಿಸುವುದು: ಉಪವಾಸ, ದೇಹದಲ್ಲಿ ಅಗತ್ಯ ಪ್ರಮಾಣದ ನೀರಿನ ಅಂಶವನ್ನು ಕಾಪಾಡಿಕೊಳ್ಳುವುದು, ಔಷಧಿಗಳು, ಕಾಂಟ್ರಾಸ್ಟ್ ಏಜೆಂಟ್‌ಗಳು ಮತ್ತು ಪರೀಕ್ಷೆಗೆ ಸಂಬಂಧಿಸಿದ ಇತರ ಪೂರ್ವಸಿದ್ಧತೆಗಳ ಸೂಚನೆಗಳನ್ನು ಅನುಸರಿಸುವುದು.
4. **Cooperate With Staff:** Follow instructions given by radiologists, radiographers, nurses, and other authorized personnel/technicians during the examination.
   ಸಿಬ್ಬಂದಿಯೊಂದಿಗೆ ಸಹಕರಿಸುವುದು: ಪರೀಕ್ಷೆಯ ಸಮಯದಲ್ಲಿ ರೇಡಿಯಾಲಜಿಸ್ಟ್‌ಗಳು, ರೇಡಿಯೋಗ್ರಾಫರ್‌ಗಳು, ದಾದಿಯರು ಮತ್ತು ಇತರ ಅಧಿಕೃತ ಸಿಬ್ಬಂದಿ/ತಂತ್ರಜ್ಞರು ನೀಡುವ ಸೂಚನೆಗಳನ್ನು ಪಾಲಿಸುವುದು.
5. **Provide Relevant Documents:** Bring the referral or prescription, previous reports and images, identification, and other required documents.
   ಅಗತ್ಯ ದಾಖಲೆಗಳನ್ನು ಒದಗಿಸುವುದು: ವೈದ್ಯರ ಶಿಫಾರಸು ಪತ್ರ ಅಥವಾ ಔಷಧಿ ಚೀಟಿ, ಹಿಂದಿನ ವರದಿಗಳು ಮತ್ತು ಚಿತ್ರಗಳು, ಗುರುತಿನ ದಾಖಲೆ ಹಾಗೂ ಇತರ ಅಗತ್ಯ ದಾಖಲೆಗಳನ್ನು ತರಬೇಕು.
6. **Disclose Relevant Risks:** Inform staff about kidney disease, previous contrast reactions, implanted devices, metal implants, or other conditions relevant to the planned examination.
   ಸಂಬಂಧಿತ ಅಪಾಯಗಳ ಕುರಿತು ತಿಳಿಸುವುದು: ಮೂತ್ರಪಿಂಡದ ಕಾಯಿಲೆ, ಹಿಂದೆ ಕಾಂಟ್ರಾಸ್ಟ್ ಏಜೆಂಟ್‌ಗಳಿಂದ ಉಂಟಾದ ಪ್ರತಿಕ್ರಿಯೆಗಳು, ದೇಹದಲ್ಲಿ ಅಳವಡಿಸಲಾದ ವೈದ್ಯಕೀಯ ಸಾಧನಗಳು, ಲೋಹದ ಇಂಪ್ಲಾಂಟ್‌ಗಳು ಅಥವಾ ಯೋಜಿತ ಪರೀಕ್ಷೆಗೆ ಸಂಬಂಧಿಸಿದ ಇತರ ಆರೋಗ್ಯ ಸ್ಥಿತಿಗಳ ಕುರಿತು ಸಿಬ್ಬಂದಿಗೆ ತಿಳಿಸುವುದು.
7. **Follow Safety Instructions:** Follow radiation safety, MRI safety, infection prevention, and other precautions as applicable.
   ಸುರಕ್ಷತಾ ಸೂಚನೆಗಳನ್ನು ಪಾಲಿಸುವುದು: ಅನ್ವಯವಾಗುವಂತೆ ವಿಕಿರಣ ಸುರಕ್ಷತೆ, ಎಂಆರ್‌ಐ ಸುರಕ್ಷತೆ, ಸೋಂಕು ತಡೆಗಟ್ಟುವಿಕೆ ಮತ್ತು ಇತರ ಮುನ್ನೆಚ್ಚರಿಕಾ ಕ್ರಮಗಳನ್ನು ಅನುಸರಿಸುವುದು.
8. **Respect Others:** Maintain decorum, respect the privacy and rights of other patients, and avoid disturbing clinical services.
   ಇತರರನ್ನು ಗೌರವಿಸುವುದು: ಶಿಸ್ತು ಮತ್ತು ಸಭ್ಯತೆಯನ್ನು ಕಾಪಾಡಿಕೊಳ್ಳುವುದು, ಇತರ ರೋಗಿಗಳ ಗೌಪ್ಯತೆ ಮತ್ತು ಹಕ್ಕುಗಳನ್ನು ಗೌರವಿಸುವುದು ಹಾಗೂ ವೈದ್ಯಕೀಯ ಸೇವೆಗಳಿಗೆ ಅಡ್ಡಿಯಾಗದಂತೆ ವರ್ತಿಸುವುದು.
9. **Meet Financial Obligations:** Pay applicable charges as agreed and seek clarification regarding billing discrepancies.
   ಆರ್ಥಿಕ ಜವಾಬ್ದಾರಿಗಳನ್ನು ಪೂರೈಸುವುದು: ಒಪ್ಪಿಗೆಯಾದಂತೆ ಅನ್ವಯವಾಗುವ ಶುಲ್ಕಗಳನ್ನು ಪಾವತಿಸುವುದು ಮತ್ತು ಬಿಲ್‌ಗಳಲ್ಲಿ ಯಾವುದೇ ವ್ಯತ್ಯಾಸಗಳಿದ್ದರೆ ಸ್ಪಷ್ಟೀಕರಣವನ್ನು ಪಡೆಯುವುದು.
10. **Collect and Review Reports:** Collect reports as instructed and consult the referring doctor for interpretation and further treatment.
    ವರದಿಗಳನ್ನು ಪಡೆದು ಪರಿಶೀಲಿಸುವುದು: ನೀಡಲಾದ ಸೂಚನೆಗಳಂತೆ ವರದಿಗಳನ್ನು ಪಡೆದುಕೊಳ್ಳುವುದು ಹಾಗೂ ಅವುಗಳ ಅರ್ಥವಿವರಣೆ ಮತ್ತು ಮುಂದಿನ ಚಿಕಿತ್ಸೆಗಾಗಿ ಪರೀಕ್ಷೆಗೆ ಶಿಫಾರಸು ಮಾಡಿದ ವೈದ್ಯರನ್ನು ಸಂಪರ್ಕಿಸುವುದು.
11. **Use Facilities Responsibly:** Take care of the centre's equipment and property and comply with its safety rules.
    ಸೌಲಭ್ಯಗಳನ್ನು ಜವಾಬ್ದಾರಿಯುತವಾಗಿ ಬಳಸುವುದು: ಕೇಂದ್ರದ ಉಪಕರಣಗಳು ಮತ್ತು ಆಸ್ತಿಯನ್ನು ಜಾಗರೂಕತೆಯಿಂದ ಬಳಸುವುದು ಹಾಗೂ ಕೇಂದ್ರದ ಸುರಕ್ಷತಾ ನಿಯಮಗಳನ್ನು ಪಾಲಿಸುವುದು.
12. **Provide Feedback Responsibly:** Communicate concerns, suggestions, or complaints respectfully to the designated authority.
    ಜವಾಬ್ದಾರಿಯುತವಾಗಿ ಪ್ರತಿಕ್ರಿಯೆ ನೀಡುವುದು: ತಮ್ಮ ಕಳವಳಗಳು, ಸಲಹೆಗಳು ಅಥವಾ ದೂರುಗಳನ್ನು ನಿಯೋಜಿತ ಅಧಿಕಾರಿಗಳಿಗೆ ಗೌರವಯುತವಾಗಿ ತಿಳಿಸುವುದು.